ನೆನಪಿಸಿಕೊಳ್ಳುತ್ತಾ ತುಂತುರು ಮಳೆಯ ಸಾಧ್ಯತೆಯಿಂದ ಗಾಬರಿಗೊಂಡಿದ್ದೆ; ಮಳೆ ಯಾವುದೇ ಕ್ಷಣ ಆರಂಭವಾಗುವುದಿತ್ತು. ನನಗೆ ಒಂದೂ ಪೆಡಲ್‌ರಿಕ್ಷಾ ಕಾಣಿಸುತ್ತಿರಲಿಲ್ಲ. ಕಚೇರಿಯಿಂದ ಹೊರಬಂದ ಎಲ್ಲರೂ ಅವಸರದಲ್ಲಿ ತಮ್ಮತಮ್ಮ ಮನೆಗಳಿಗೆ ದೌಡಾಯಿಸಿ ಹೋಗುತ್ತಿದ್ದರು. ಚಳಿಗಾಲದ ಮಳೆಯಲ್ಲಿ ಯಾರು ತಾನೇ ನೆನೆಯಲು ಬಯಸುತ್ತಾರೆ? ನಾನು ಹಗುರ ಶಾಲನ್ನು ಹೊದ್ದುಕೊಂಡಿದ್ದೆ. ಮೋಡಗಳಿಂದಾಗಿ ಬೆಳಿಗ್ಗೆಯಿಂದ ಸೆಕೆಯ ವಾತಾವರಣವಿತ್ತು. ನನ್ನ ಬ್ಯಾಗಿನಲ್ಲಿ ಒಂದು ಸಣ್ಣ ಶಾಲನ್ನು ಸಹ ಇಟ್ಟುಕೊಂಡಿದ್ದೆ. ನನ್ನ ಸ್ಕೂಟಿ ತೊಂದರೆ ಕೊಡುತ್ತಿತ್ತು. ಹೀಗಾಗಿ ಅಂದು ನಾನು ಆಟೊ ರಿಕ್ಷಾದಲ್ಲಿ ಕಚೇರಿಗೆ ಹೋಗಿದ್ದೆ. ಸ್ಕೂಟಿಯ 'ಸೆಲ್ಫ್ ಸ್ಟಾರ್ಟರ್' ವರ್ಷದ ಹಿಂದೆಯೇ ಹಾಳಾಗಿತ್ತು. ಈಗ ಅರ್ಧ ಕಿಕ್ಕಿಗೆ ಪ್ರತಿಯಾಗಿ ಹತ್ತು ಕಿಕ್‌ಗೆ ಸ್ಕೂಟಿ ಸ್ಟಾರ್ಟ್ ಆಗುತ್ತಿತ್ತು.

ಕೀರ್ತಿ ನಾನು ಸ್ಕೂಟಿಯನ್ನು ಬದಲಿಸಬೇಕೆಂದು ಸಾಮಾನ್ಯವಾಗಿ ಹೇಳುತ್ತಿದ್ದಳು. ನಾನು ಏಳು ವರ್ಷ ಹಳೆಯ ವಾಹನದಿಂದ ಮುಕ್ತಳಾಗುವುದು ಸುಲಭವಲ್ಲವೆಂದು ಯೋಚಿಸುತ್ತಿದ್ದೆ. ನನಗೆ ಅದರ ಬಗ್ಗೆ ಒಂದು ವಿಧದ ವಿಶೇಷ ಪ್ರೀತಿ ಹುಟ್ಟಿತ್ತು. ಆ ಪ್ರೀತಿ ನನ್ನನ್ನು, ಸ್ಕೂಟಿಗೆ 'ಸರ್ವೀಸಿಂಗ್' ಮಾಡಿಸಿ ಇನ್ನಷ್ಟು ದಿನ ಅದನ್ನು ಚಾಲನೆ ಮಾಡಬೇಕೆಂದು ಪ್ರೇರೇಪಿಸುತ್ತಿತ್ತು.

'ಬನ್ನಿ, ನಾನು ನಿಮಗೆ ಡ್ರಾಪ್ ಕೊಡ್ತೀನಿ' ಕೀರ್ತಿ ಆಫೀಸಿನಿಂದ ಹೊರಡುವಾಗ ನನಗೆ ಹೇಳಿದ್ದಳು.

'ಬೇಡ, ನಾನು ಹೋಗ್ತೀನಿ' ಎಂದಿದ್ದೆ.

'ಮಳೆ ಬರಬಹುದು'

'ಹೌದು, ಮಳೆ ಬರುವ ಲಕ್ಷಣಗಳಿವೆ'

'ಮತ್ತೆ ಹೇಗೆ ಹೋಗ್ತೀರ?'

'ಆಟೊದಲ್ಲಿ'

'ಆಟೊ ಸಿಗದಿದ್ರೆ?'

'ಸಿಗುತ್ತೆ. ಈಗ ಕಚೇರಿ ಮುಗಿಯುವ ಸಮಯ. ಒಂದಲ್ಲ ಒಂದು ಆಟೊ ಸಿಕ್ಕೇ ಸಿಗುವುದು', ನಾನು ಕೀರ್ತಿಗೆ ಆಶ್ವಾಸನೆಯನ್ನು ಕೊಟ್ಟಿದ್ದೆ.

'ಇವತ್ತು ನೀವು ನಿಮ್ಮ 'ಡಕೋಟಾ' ತರಲಿಲ್ವಾ?' ಕೀರ್ತಿ ಹೋಗುವಾಗ ತಮಾಷೆ ಮಾಡಿದಳು. ಅವಳು ನನ್ನ ಸ್ಕೂಟಿಗೆ 'ಡಕೋಟಾ' ಎನ್ನುತ್ತಿದ್ದಳು.

'ಇಲ್ಲ! ಅದು ತುಂಬಾ ನಾಜೂಕಾಗಿದೆ. ಈ ವೇಳೆಯಲ್ಲಿ ಅದಕ್ಕೆ ನೆಗಡಿಯಾಗಬಹುದು' ನಾನೂ ತಮಾಷೆಯಲ್ಲಿ ಹೇಳಿದೆ.

ಕೀರ್ತಿ ತನ್ನ ಮಾರುತಿ800 ಕಾರು ಚಾಲನೆ ಮಾಡುತ್ತಾ ಹೊರಟು ಹೋದಳು. ಈಗ್ಗೆ ನಾಲ್ಕು ತಿಂಗಳ ಹಿಂದೆಯಷ್ಟೇ ಅವಳ ಪತಿ ಅವಳ ಹುಟ್ಟುಹಬ್ಬದಂದು ಅವಳಿಗೆ ಈ ಮಾರುತಿ 800 ಕಾರನ್ನು ಉಡುಗೊರೆಯಾಗಿ ಕೊಟ್ಟಿದ್ದರು.

'ಕೀರ್ತಿ ಅದೃಷ್ಟವಂತೆ!' ಕೀರ್ತಿಯ ಪತಿ ಅವಳಿಗೆ ಮಾರುತಿ 800 ಕಾರನ್ನು ಅವಳಿಗೆ ಅವಳ ಹುಟ್ಟುಹಬ್ಬದಂದು ಕೊಟ್ಟಿದ್ದಾರೆಂದು ಕೇಳಿ ಮಿಸೇಜ್ ಕಶ್ಯಪ್ ಹೀಗೆ ಉದ್ಗಾರ ಮಾಡಿದ್ದರು.

'ನಮ್ಮ ಮನೆಯವರೂ ಇದ್ದಾರೆ, ಅವರಿಗೆ ನನ್ನ ಹುಟ್ಟುಹಬ್ಬ ನೆನಪೇ ಇರುವುದಿಲ್ಲ. ಒಂದು ವೇಳೆ ಅವರಿಗೆ ನನ್ನ ಹುಟ್ಟುಹಬ್ಬವನ್ನು ನೆನಪು ಮಾಡಿದರೆ, ಅವರು ಶಾಂತ ಚಿತ್ತದಿಂದ, 'ಸರಿ, ಒಂದು ಹೋಟೆಲ್‌ಗೆ ಹೋಗಿ ಡಿನ್ನರ್ ಮಾಡೋಣ' ಎನ್ನುತ್ತಾರೆ. ಇದೆಂಥ ಗಿಫ್ಟ್? ಹೋಟೆಲ್‌ನಲ್ಲಿ ಡಿನ್ನರ್ ಮಾಡಿ ಹುಟ್ಟುಹಬ್ಬ ಆಚರಿಸ್ತಾರಾ? ಹೂಂ ಹು!' ಮಿಸೇಜ್ ಕಶ್ಯಪ್‌ರ ಉದ್ಗಾರ ಕೇಳಿ ನನಗೆ ಭಯವಾಗುತ್ತಿತ್ತು. ಅವರು ತಮ್ಮ 'ಸಾಹೇಬರು' ಅಂದರೆ ತಮ್ಮ ಪತಿಯ ಬಗ್ಗೆ ಹೀಗೇ ಹೇಳುತ್ತಿದ್ದರು. ಅವರು ಸದಾ ದಣಿದವರಂತೆ, ತಮ್ಮ ವಿವಾಹ ಒಂದು ಭಾರವಾದ ಹೊರೆಯಂತೆ, ಅದನ್ನು ಅವರು ಹೊರಲು ವಿವಶರಾದವರಂತೆ ತೋರುತ್ತಿದ್ದರು. ಇಂಥ ಮದುವೆಗಿಂತ ಮದುವೆಯನ್ನೇ ಆಗದಿರುವುದು ಲೇಸು. ಇನ್ನೊಂದೆಡೆ ಕೀರ್ತಿಯ ವೈವಾಹಿಕ ಜೀವನವನ್ನು ನೋಡಿದಾಗ, ವಿವಾಹ ಒಂದು ಲಾಭಕರ ಸಂಬಂಧವೆಂದು ಅನ್ನಿಸುತ್ತದೆ. ಒಮ್ಮೆ ಕಚೇರಿಯ ಅಕೌಂಟೆಂಟ್, ಕೀರ್ತಿಯನ್ನು ಯಾವುದೋ ಒಂದು ವಿಷಯಕ್ಕೆ ಸಿಕ್ಕಾಪಟ್ಟೆ ಗದರಿಸಿದ್ದ. ಕೀರ್ತಿಯದೇ ತಪ್ಪಾಗಿತ್ತು, ಆದರೆ ಅವಳು ರೋದಿಸಿ ರಂಪಾಟ ಮಾಡಿ ತನ್ನ ಇಡೀ ಕರ್ಚೀಪನ್ನು ಒದ್ದೆ ಮಾಡಿದಳು. ಕರ್ಚೀಪು ಒದ್ದೆಯಾದ ನಂತರ ತನ್ನ ಸೀರೆಯ ಸೆರಗಿನಿಂದ ತನ್ನ ಕಣ್ಣುಗಳು ಮತ್ತು ಮೂಗನ್ನು ಒರೆಸಿಕೊಂಡಳು. ಶುದ್ಧ ಸಿಲ್ಕ್‌ನ ಡಿಸ್ಟೆಂಪರ್ ಗ್ರೀನ್ ಬಣ್ಣದ ಸೀರೆಯ ಮೇಲೆ ಕಣ್ಣೀರಿನ ಉಪ್ಪು ಕಲೆ, ನೋಟಿಸ್ ಬೋರ್ಡಿನ ಮೇಲೆ ಅಂಟಿಸಿದ ಕಾಗದದಂತೆ ಪ್ರತ್ಯೇಕವಾಗಿ ಕಾಣಿಸುತ್ತಿತ್ತು. ಕಥೆ ಇಲ್ಲಿಗೇ ಮುಗಿಯಲಿಲ್ಲ. ಕೀರ್ತಿ ಅಥವಾ ಯಾರೋ ಬೇರೆಯವರು ಕೀರ್ತಿಯ ಪತಿ ಸದಾಶಿವನಿಗೆ ಫೋನ್ ಮಾಡಿ ಈ ಗಲಾಟೆಯ ಸೂಚನೆಯನ್ನು ನೀಡಿದರು. ಸುದ್ದಿ ತಿಳಿಯುತ್ತಲೇ ಸದಾಶಿವ ಕಚೇರಿಗೆ ಬಂದ.

'ಎಲ್ಲಿದ್ದಾನೆ ಬೇವರ್ಸಿ... ಅಕೌಂಟೆಂಟ್? ನಿಯಮ ಏನು ಹೇಳುತ್ತೆ ಅಂತ ಈಗ್ಲೇ ಹೇಳ್ತೀನಿ. ನನ್ನ ಹೆಂಡ್ತಿಗೆ ಕಾನೂನು ಕಲಿಸ್ತಾನಾ, ಎಲ್ಲಿದ್ದಾನೆ ಆ ಬೇವರ್ಸಿ...!' ಸದಾಶಿವ ಅಕೌಂಟೆಂಟ್ ಇರುವಲ್ಲಿಗೆ ಹೋದ.

ಅಕೌಂಟೆಂಟ್ ಜಿ.ಪಿ. ಸಿಕರವಾರ್ ಥರ ಥರ ಕಂಪಿಸಿದ.

'ಸದಾಶಿವಜಿ, ಶಾಂತರಾಗಿ! ಅಂಥದ್ದೇನೂ ನಡೆದಿಲ್ಲ'.

'ಕೀರ್ತಿಯದು ಮಗುವಿನಂಥ ಮನಸ್ಸು, ಸಣ್ಣ ಸಣ್ಣ ಮಾತಿಗೂ ಅಳ್ತಾಳೆ.'

'ಹೌದು, ಸದಾಶಿವ್. ಸಿಟ್ಟು ಮಾಡ್ಬೇಡಿ. ಇವೆಲ್ಲಾ ನಡೀತಿರುತ್ತೆ. ಅಕೌಂಟೆಂಟ್ ಸಿಕರವಾರ್ ತುಂಬಾ ಒಳ್ಳೆಯವರು. ಅವರ ಮನಸ್ಸಿನಲ್ಲಿ ಕೆಡುಕಿಲ್ಲ.'

'ಹೌದು, ಪಾಪ ಅವರು ದೊಡ್ಡ ಸಾಹೇಬ್ರಿಂದ ಬೈಸಿಕೊಂಡು ಬಂದಿದ್ದರು, ಆ ಸಿಟ್ಟನ್ನು ಕೀರ್ತಿ ಮೇಲೆ ತೋರಿಸಿದರು. ಹಾಗಂತ ಅವರು ತುಂಬಾ ಒಳ್ಳೆಯ ಜನ.' ಕಚೇರಿಯ ಪ್ರತಿಯೊಬ್ಬ ಸಿಬ್ಬಂದಿ ಸದಾಶಿವನ ಸಿಟ್ಟನ್ನು ಶಮನಗೊಳಿಸಲು ಪ್ರಯತ್ನಿಸಿದರು.

'ನಾನು ಕೀರ್ತಿಯನ್ನು ನನ್ನ ತಂಗಿಯೆಂದು ಭಾವಿಸಿ ಗದರಿಸಿದ್ದೆ, ನಾನು ಅವಳ ಬಗ್ಗೆ ತುಂಬಾ ಗಮನ ಕೊಡ್ತೀನಿ', ಅಕೌಂಟೆಂಟ್ ಜಿ.ಪಿ. ಸಿಕರವಾರ್ ಮೆಲ್ಲನೆ ಮುಗುಳ್ನಗುತ್ತಾ ಸದಾಶಿವನಿಗೆ ಹೇಳಿದರು. ಸ್ವಲ್ಪ ಹೊತ್ತಿನ ನಂತರ ಅವರು ಕೀರ್ತಿಯಲ್ಲಿ ಕ್ಷಮೆಯನ್ನು ಯಾಚಿಸಿ, ಭವಿಷ್ಯದಲ್ಲಿ ಹೀಗೆ ಗದರಿಸುವುದಿಲ್ಲವೆಂದು ಮಾತು ಸಹ ಕೊಟ್ಟರು.

'ವಾಹ್! ಗಂಡ ಅಂದರೆ ಹೀಗಿರಬೇಕು' ಮಿಸೇಜ್ ಕಶ್ಯಪ್ ಕೀರ್ತಿಯ ಅದೃಷ್ಟದ ಬಗ್ಗೆ ಅಸೂಯೆಪಡುತ್ತಾ ಹೇಳಿದ್ದರು, 'ನನ್ನನ್ನು ಯಾರಾದರು ಗಲ್ಲಿಗೆ ಹಾಕಿದ್ರೂ ನಮ್ಮ ಸಾಹೇಬ್ರು ಗಲ್ಲಿಗೆ ಹಾಕುವವನಿಗೆ, ನೀನು ಮಾಡಿದ್ದು ಸರಿ' ಎಂದೇ ಹೇಳುತ್ತಾರೆ.'

ಮಿಸೇಜ್ ಕಶ್ಯಪ್ ತಮ್ಮ ಪತಿಯ ಬಗ್ಗೆ ಹೇಳುವಾಗ 'ನಮ್ಮ ಸಾಹೇಬ್ರು' ಎಂದೇ ಸಂಬೋಧನೆ ಮಾಡುತ್ತಿದ್ದರು. ಈ ಬಗ್ಗೆ ಕೀರ್ತಿ ಅವರಿಗೆ ತಮಾಷೆ ಮಾಡುತ್ತಿದ್ದಳು.

'ಯಾವ ಸಾಹೇಬ್ರು? ಮನೆಯವರೋ ಅಥವಾ ಹೊರಗಿನವರೋ?'

'ಮನೆ ಸಾಹೇಬ್ರ ಬಗ್ಗೆ ಹೇಳ್ತಿದ್ದೀನಿ. ಹೊರಗಿನವರ ಬಗ್ಗೆ ನನಗೇನಾಗಬೇಕಿದೆ?' ಕೀರ್ತಿಯ ತಮಾಷೆಯನ್ನು ಅರ್ಥ ಮಾಡಿಕೊಳ್ಳದೆ ಮಿಸೇಜ್ ಕಶ್ಯಪ್ ನಿಟ್ಟುಸಿರು ಬಿಡುತ್ತಿದ್ದರು. ಕೀರ್ತಿಯ ವರ್ಗಾವಣೆಯ ವಿಷಯ ಬಂದಾಗಲೂ ಅವಳ ಪತಿ ಸದಾಶಿವ ಬಂದು ವಕ್ಕರಿಸುತ್ತಿದ್ದ. ಸದಾಶಿವನ ಭಯದಿಂದಾಗಿ ಕೀರ್ತಿಗೆ ಭಾರವಲ್ಲದ ಸೆಕ್ಷನ್ ಕೊಡಲಾಗಿತ್ತು. ಆ ಸೆಕ್ಷನ್‌ನಲ್ಲಿ ಅಂಥ ಕೆಲಸವೇನೂ ಇರುತ್ತಿರಲಿಲ್ಲ. ಸದಾಶಿವ ಗುತ್ತಿಗೆದಾರನಾಗಿದ್ದ. ಅವನು ಸರ್ಕಾರಿ ಕಟ್ಟಡಗಳು ಮತ್ತು ರಸ್ತೆ ನಿರ್ಮಾಣಗಳ ಗುತ್ತಿಗೆಯನ್ನು ಪಡೆಯುತ್ತಿದ್ದ. ಲಕ್ಷಲಕ್ಷ ಹಣದಲ್ಲಿ ಆಡುವ ಕೀರ್ತಿ ಸಾವಿರ ರೂಪಾಯಿಗಳ ವೇತನ ಪಡೆಯಲು ಏಕೆ ಬರುತ್ತಿದ್ದಳು? ಈ ಬಗ್ಗೆ ಯೋಚಿಸಿದಾಗ ನನಗೆ ಅನ್ನಿಸಿದ್ದೇನೆಂದರೆ, ಅವಳಿಗೆ ತನ್ನ ಸೀರೆ, ಒಡವೆ ಮುಂತಾದವುಗಳನ್ನು ಪ್ರದರ್ಶಿಸಲು ಒಂದು 'ರ್‍ಯಾಂಪ್' ಬೇಕಿತ್ತು. ಕಚೇರಿಯೇ ಅವಳ ರ್‍ಯಾಂಪ್ ಆಗಿತ್ತು.

ಸರಿ, ನಾನೀಗ ರಿತಿಕ್‌ನ ಮೊದಲ ಪ್ರಸ್ತಾವ ಒಪ್ಪಿಕೊಂಡ ಆ ದಿನದ ಬಗ್ಗೆ ಯೋಚಿಸುತ್ತಿದ್ದೇನೆ. ಒಂದು ವೇಳೆ ನಾನು ರಿತಿಕ್‌ನ ಪ್ರಸ್ತಾವವನ್ನು ಒಪ್ಪಿಕೊಳ್ಳದಿದ್ದರೆ ಏನಾಗುತ್ತಿತ್ತು? ಬಹುಶಃ ಈಗಿರುವ ನನ್ನ ಜೀವನ, ಎಂದಿಗೂ ಇರುತ್ತಿರಲಿಲ್ಲ. ಇದಕ್ಕಿಂತ ಉತ್ತಮವಾಗಿರುತ್ತಿತ್ತು ಅಥವಾ ಕೆಡುಕಾಗಿರುತ್ತಿತ್ತು. ಯಾರಿಗೆ ಗೊತ್ತು!

ಆಗ ತುಂತುರು ಮಳೆ ಆರಂಭವಾಗಿತ್ತು. ತಣ್ಣನೆಯ ಗಾಳಿ ಸಹ ಬೀಸುತ್ತಿತ್ತು. ಮೋಡಗಳು ಗರ್ಜಿಸಿ, ಕೆಲವೇ ಕ್ಷಣಗಳಲ್ಲಿ ಮಳೆ ಹೆಚ್ಚಾಗುವುದು, ಕಡಿಮೆಯಾಗುವುದಿಲ್ಲ ಎಂದು ಸೂಚಿಸುತ್ತಿದ್ದವು. ಒಂದು ವೇಳೆ ಬೇಗನೇ ಆಟೊ ರಿಕ್ಷಾ ಸಿಗದಿದ್ದರೆ, ನಾನು ಮನೆಗೆ ಹೋಗುವುದು ಹೇಗೆ? ಕಚೇರಿಯ ಸಿಬ್ಬಂದಿಗಳೆಲ್ಲರೂ ಹೊರಟು ಹೋಗಿದ್ದರು. ಲಿಫ್ಟ್ ಕೊಡುವಂಥ ವ್ಯಕ್ತಿ ಸಹ ಹೊರಟು